ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ವಿಷಯ:- ಕರ್ನಾಟಕ ಹಾಲು ಮಹಾಮಂಡಳ ಗಳಿಸಿದ ಲಾಭ ಅಥವಾ ನಷ್ಟದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 595 (173)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಹಾಲು ಮಹಾ ಮಂಡಳಿ, ಬೆಂಗಳೂರು ಕಳೆದ ವರ್ಷ ಗಳಿಸಿದ ಲಾಭ :ನಷ್ಟ ಎಷ್ಟು?

ಆ) ಪ್ರಾರಂಭದಿಂದ ಕಳೆದ ವರ್ಷದವರೆಗೆ ಗಳಿಸಿದ ಒಟ್ಟು ಸಂಚಿತ ಲಾಭ : ನಷ್ಟ ಎಷ್ಟು?

ಶ್ರೀ ಬಿ.ಬಿ.ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು):-

ಅ) 1995-96ನೇ ಸಾಲಿನಲ್ಲಿ ಗಳಿಸಿದ ಲಾಭ 129.09 ಲಕ್ಷ ರೂಪಾಯಿಗಳು.

ಆ) ಪ್ರಾರಂಭದಿಂದ ಕಳೆದ ಸಾಲಿನವರೆಗೆ ಒಟ್ಟು ಸಂಚಿತ ನಿವ್ವಳ ನಷ್ಟ ರೂ. 4,457.46 ಲಕ್ಷಗಳು.

ವಿಷಯ:- 1995-96ನೇ ಸಾಲಿನಲ್ಲಿ ಧಾರವಾಡ ದಕ್ಷಿಣ ಲೋಕಸಭಾ ಸದಸ್ಯರ ಅಭಿವೃದ್ಧಿ ನಿಧಿಗೆ ಬಂದ ಹಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 596 (336)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ಉಪಮುಖ್ಯಮಂತ್ರಿಗಳು ಮತ್ತು ಹಣಕಾಸು, ಯೋಜನಾ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಧಾರವಾಡ ದಕ್ಷಿಣ ಲೋಕಸಭಾ ಸದಸ್ಯರ ಅಭಿವೃದ್ಧಿ ನಿಧಿಗೆ ಬಂದ ಹಣ ಎಷ್ಟು? ಹಾಗೂ ಜಮಾ ಆಗಿದ್ದು ಎಂದು?

ಆ) 31.5.96ರವರೆಗೆ ತಾಲ್ಲೂಕುವಾರು ಖರ್ಚು ಮಾಡಿದ ಹಣ ಎಷ್ಟು? ಹಾಗೂ ಉಳಿದ ಹಣ ಎಷ್ಟು?

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು ಮತ್ತು ಹಣಕಾಸು, ಯೋಜನಾ ಮತ್ತು ಕಾರ್ಮಿಕ ಸಚಿವರು):-

ಆ) ಸಂಸದ್ ಸದಸ್ಯರ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆಯಡಿಯಲ್ಲಿ 1995-96ನೇ ಸಾಲಿನಲ್ಲಿ ಧಾರವಾಡ ದಕ್ಷಿಣ ಲೋಕಸಭಾ ಕ್ಷೇತ್ರಕ್ಕೆ 100 ಲಕ್ಷ ರೂ.ಗಳ ಅನುದಾನ ಬಂದಿರುತ್ತದೆ. ದಿನಾಂಕ : 10.7.95ರಂದು 50 ಲಕ್ಷ ರೂ.ಗಳು ಹಾಗೂ ದಿನಾಂಕ 23.12.95ರಂದು 50 ಲಕ್ಷ ರೂ.ಗಳು ಜಮಾ ಆಗಿರುತ್ತದೆ.

ಆ) ತಾಲ್ಲೂಕುವಾರು ವೆಚ್ಚದ ವಿವರಗಳು ಕೆಳಕಂಡಂತಿವೆ:

ತಾಲ್ಲೂಕು	ಖರ್ಚು (ಲಕ್ಷ ರೂ.ಗಳಲ್ಲಿ)
ಬ್ಯಾಡಗಿ	7.00
ಶಿಗ್ಗಾಂವ	5.00
ರಾಣೆಬೆನ್ನೂರು	3.00
ಶಿರಹಟ್ಟಿ	15.00
ಕುಂದಗೋಳ	2.00
ಹಾವೇರಿ	1.25
ಒಟ್ಟು	33.25

66.75 ರೂ.ಗಳು ಬಾಕಿ ಉಳಿದಿರುತ್ತದೆ.

ವಿಷಯ:- ಶ್ರೀರಂಗಪಟ್ಟಣ - ಬೀದರ್ ರಾಜ್ಯ ಹೆದ್ದಾರಿ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 597 (732)

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀರಂಗಪಟ್ಟಣ - ಬೀದರ್ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಲು ರಾಜ್ಯ ಸರ್ಕಾರದವರು ನಿರ್ಧರಿಸುವರೇ?

ಆ) ಹಾಗಿದ್ದಲ್ಲಿ ಈ ರಸ್ತೆಯ ಒಟ್ಟು ಉದ್ದವೆಷ್ಟು?

ಇ) ಈ ಬಗ್ಗೆ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಕಳುಹಿಸಿರುವರೇ?

ಈ) ಹಾಗಿದ್ದಲ್ಲಿ ಯಾವಾಗ ಕಳುಹಿಸಲಾಯಿತು.